Rotary

ರೋಟರಿ ಐಸಿರಿ ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 3

ದಿನಾಂಕ: 22.07.2025



Rtn. Anil Kumar
President



Rtn. Krishnappa
Secretary

## ಉಲ್ಲಾಸದ ಮನೋಭಾವದಿಂದ ಮಾಡಿದ ಕಾರ್ಯಗಳೆಲ್ಲವೂ ಯಶಸ್ವಿ ಆಗಿಯೇ ಆಗುತ್ತದೆ.

– ರೊ. ಗುರುಪ್ರಸಾದ್ ಕಾಮತ್



"ಉತ್ತಮ ಧ್ಯೇಯದೊಂದಿಗೆ, ಉಲ್ಲಾಸದ ಮನೋಭಾವನೆಯೊಂದಿಗೆ ಮಾಡಿದ ಕೆಲಸಕಾರ್ಯಗಳೆಲ್ಲವೂ ಖಂಡಿತವಾಗಿಯೂ ಯಶಸ್ವಿ ಆಗುತ್ತದೆ. ಇದಕ್ಕೆ ನಮ್ಮ ರೋಟರಿ ಸಮುದಾಯದಳ ಐಸಿರಿ ಮಾಡುತ್ತಿರುವ ಚಟುವಟಿಕೆಗಳೇ ಸಾಕ್ಷಿ. ರೊ. ಕೆ. ಪ್ರಭಾಕರ ಶೆಟ್ಟಿಯವರ ನೇತೃತ್ವದಲ್ಲಿ ಒಂಭತ್ತು ಜನರು ಮುಂದಡಿಯಿತ್ತು ಕಟ್ಟಿದ ರೋಟರಿ ಐಸಿರಿಯ ಜೊತೆಗೆ ಹೆಜ್ಜೆಹಾಕಿದ ಈ ಸಮುದಾಯದಳ, "ನಮ್ಮ ನಡೆ ಕೃಷಿಯ ಕಡೆ" ಎನ್ನುವ ಧ್ಯೇಯಕ್ಕೆ ಪೂರಕವಾಗಿ, ಪರಿಸರದಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಮಾಡಿ ಗಮನ ಸೆಳೆದಿದೆ. ಅದಕ್ಕಾಗಿ 2024–25ನೇ ಸಾಲಿನ RCC ಐಸಿರಿ ಅಧ್ಯಕ್ಷರಾದ ಶ್ರೀ ಸತೀಶ್ ನಾಯ್ಕ್, ಕಾರ್ಯದರ್ಶಿ ಶ್ರೀಮತಿ ಶಾಲಿನಿ ಸಾಮಂತ್ ಮತ್ತು ತಂಡಕ್ಕೆ ಅಭಿನಂದಿಸುತ್ತೇನೆ. 2025–26ನೇ ಸಾಲಿನಲ್ಲಿ ಈ ತಂಡವನ್ನು ಇಬ್ಬರು ಮಹಿಳಾಮಣಿಗಳು ಮುನ್ನಡೆಸಲಿದ್ದಾರೆ. ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ನಾಯ್ಕ್ ಮತ್ತು ಕಾರ್ಯದರ್ಶಿ ಶೀಮತಿ ಶಾರದಾ ಎಸ್. ಸಾರಥ್ಯದಲ್ಲಿ RCC ಐಸಿರಿಯು ಉತ್ತುಂಗಕ್ಕೇರಲಿ" ಎಂದು ರೋಟರಿ ಜಿಲ್ಲಾ ಆರ್.ಸಿ.ಸಿ., ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ರವರು ಶುಭ ಹಾರೈಸಿದರು. ಅವರು ಜುಲೈ 20ರ ಭಾನುವಾರದಂದು ಕಬ್ಯಾಡಿಯ ಆರ್.ಸಿ.ಸಿ., ಕಾರ್ಯಾಲಯದಲ್ಲಿ ನಡೆದ ಪದಪ್ರದನಾ ಸಮಾರಂಭದಲ್ಲಿ ಪದಪ್ರದನಾಧಿಕಾರಿಯಾಗಿ ಮಾತನಾಡುತ್ತಿದ್ದರು.

ನೂತನ ಅಧ್ಯಕ್ಷೆ ಮತ್ತು ಕಾರ್ಯದರ್ಶಿಗೆ ಸಂಸ್ಥೆಯ ಪಿನ್ ತೊಡಿಸಿ ಮಾತನಾಡಿದ ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ರವರು, ಈ ಎರಡೂ ಹುದ್ದೆಗಳಲ್ಲಿ ಮಹಿಳೆಯರೇ ಇರುವುದಕ್ಕೆ ಸಂತಸ ವ್ಯಕ್ತಪಡಿಸಿ, "ಇಂದು ನಮ್ಮ ರೋಟರಿ ಸಮುದಾಯದಳವು ಒಂದು ಸಶಕ್ತ ಮತ್ತು ಸಧೃಢ ಸಮುದಾಯದಳವಾಗಿ independent ಆಗಿ ಕಾರ್ಯನಿರ್ವಹಿಸುವಸ್ತರ ಮಟ್ಟಿಗೆ ಬೆಳೆದಿದೆ. ಇಂತಹ ತಂಡದಲ್ಲಿರುವ ಎಲ್ಲ ಸದಸ್ಯರೂ ಸಹ ವೈಯಕ್ತಿಕವಾಗಿ ಸಭೆಯ ಕಾರ್ಯಕಲಾಪ ನಿರ್ವಹಿಸುವಷ್ಟು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಆರ್.ಸಿ.ಸಿ., ಜಿಲ್ಲಾ ಪ್ರತಿನಿಧಿ ಶ್ರೀ ಜಯರಾಮ್ ಶೆಟ್ಟಿಗಾರ್ ಮಾತನಾಡಿ, ಎಲ್ಲರೂ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕಾರ್ಯಕೈಗೊಂಡರೆ ಜೀವನ ಸಾರ್ಥಕವಾಗುತ್ತದೆ ಎಂದರು. ರೋಟರಿ ಐಸಿರಿ ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈಯವರು RCCಯು ಜನರಿಗೆ ಸ್ಪಂದಿಸುವಂಥ ರೀತಿ ಖುಷಿಯಾಗುತ್ತೆ, ಇವರ ಆಟಿಡೊಂಜಿ ದಿನ ಈ ಪರಿಸರದಲ್ಲೇ ಅತ್ಯಂತ ವಿಶಿಷ್ಟ ಕಾರ್ಯಕ್ರಮ ಎಂದು ಶ್ಲಾಘಿಸಿದರು. ಆರ್.ಸಿ.ಸಿ., ಸಂಯೋಜಕರಾದ ರೊ. ಕೆ. ಪ್ರಭಾಕರ ಶೆಟ್ಟಿಯವರು ಸಮುದಾಯದಳ ಐಸಿರಿ ನಡೆದುಬಂದ ದಾರಿಯನ್ನು ಸ್ಮರಿಸುತ್ತಾ ಇದುವರೆಗೆ ಯಶಸ್ವಿಯಾಗಿ ಏರ್ಪಡಿಸಿದ ಕಾರ್ಯಕ್ರಮಗಳ ವಿವರ ನೀಡಿ, ರೋಟರಿ ಮತ್ತು ಸಮುದಾಯದಳದ ಬಾಂಧವ್ಯದ ಬೆಸುಗೆಯನ್ನು ಕೊಂಡಾಡಿದರು. ರೋಟರಿ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್ ಸಮುದಾಯದಳಕ್ಕೆ ಸಹಕಾರದ ಭರವಸೆ ನೀಡುತ್ತಾ ನಾವೆಲ್ಲರೂ ಒಂದು ಮಾರ್ಗಸೂಚಿಗನುಗುಣವಾಗಿ ಕೆಲಸಕಾರ್ಯಗಳನ್ನು ಮಾಡುತ್ತೇವೆ ಮತ್ತು ಜೊತೆಯಾಗಿ ಕೆಲಸ ಮಾಡುವಾಗ ಆತ್ಮೀಯತೆ ಬೆಳೆಯುತ್ತದೆ ಎಂದರು. ಪದಸ್ವೀಕಾರ ಭಾಷಣ ಮಾಡಿದ ಶ್ರೀಮತಿ ಲಕ್ಷ್ಮೀಯವರು ತಮ್ಮ ಪದಾಧಿಕಾರಿಗಳನ್ನು ಸಭೆಗೆ ಪರಿಚಯಿಸಿದರು. ಶ್ರೀಮತಿ ಶಾಲಿನಿ ಸಾಮಂತ್ ಗತವರ್ಷದ ಚಟುವಟಿಕೆಗಳ ವರದಿ ವಾಚಿಸಿದರು. ರೊ. ಸುನೀಲ್ ಕುಮಾರ್ ಮತ್ತು ರೊ. ಗೀತಾಶ್ರೀ ಎಂ. ಉಪಾಧ್ಯ ನಿರೂಪಣೆಗೈದರು. ಸಮುದಾಯದಳ ಐಸಿರಿಯ ನೂತನ ಕಾರ್ಯದರ್ಶಿ ಶೀಮತಿ ಶಾರದಾ ಎಸ್. ಧನ್ಯವಾದ ಸಮರ್ಪಿಸಿದರು. ರೋಟರಿ ಐಸಿರಿಯ ಕಾರ್ಯದರ್ಶಿ ರೊ ಕೃಷ್ಣಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಪ್ರೇರಣಾ ಸಿರಿ: "ರೋಟರಿ ಸಮುದಾಯ ದಳ"

ಗ್ರಾಮೀಣ ಪ್ರದೇಶದಲ್ಲಿ ರೋಟರಿ ಸದಸ್ಯತನ ಶುಲ್ಕ ಪಾವತಿಸಲು ಅನಾನುಕೂಲ ಇರುವ ಯಾವುದೇ ವಯೊಮಾನದ ನಿರ್ಬಂಧ ಇಲ್ಲದೆ ಸಮಾಜ ಸೇವೆ ಮಾಡುವವರನ್ನು ಗುರುತಿಸಿ ಒಗ್ಗೂಡಿಸಿ ರೋಟರಿ ರಚಿಸುವ ಸಂಘಟನೆಯೇ "ರೋಟರಿ ಸಮುದಾಯ ದಳ" ಇದು, ರೋಟರಿ ಹಾಗೂ ಗ್ರಾಮೀಣ ಪ್ರದೇಶದ ಜನರ ಕೊಂಡಿಯಾಗಿದೆ, ರೋಟರಿ, ಸರ್ಕಾರ, ಸರ್ಕಾರೇತರ ಸಂಸ್ಥೆಗಳ ಹಾಗೂ ದಾನಿಗಳಿಂದ ನೇರವಾಗಿ ಸಂಬಂಧಪಟ್ಟವರಿಗೆ ಸಹಕಾರ ಸಹಾಯ ಮಾಡುತ್ತದೆ, ಅನೇಕ ವಿಚಾರಗಳ ಬಗ್ಗೆ ಮಾಹಿತಿ ನೀಡುವುದು ಮತ್ತು ಫಲಾನುಭವಿಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಆರ್.ಸಿ.ಸಿ. ಸದಸ್ಯರಾದ ವರಿಗೆ ಸಮಾಜದಲ್ಲಿ ಸಿಗುವ ಗೌರವ ಹಿರಿದು. ಆರ್.ಸಿ.ಸಿ. ಸದಸ್ಯರಾದವರಿಗೆ ಸಭಾ ಕಂಪನ ಇರದು, ನಾಯಕತ್ವದ ಗುಣ ಹೆಚ್ಚಾಗುತ್ತದೆ, ಆರ್.ಸಿ.ಸಿ. ಸದಸ್ಯರಲ್ಲಿ, ಸಂಸ್ಕಾರ, ಸಹಕಾರ, ಸಂಘಟನೆ ಗುಣ ಇರುತ್ತದೆ.

ಲೇಖನ: ರೊ. ಕೆ. ಪ್ರಭಾಕರ ಶೆಟ್ಟಿ

ಸ್ಥಾಪಕಾಧ್ಯಕ್ಷರು ಮತ್ತು ಆರ್.ಸಿ.ಸಿ., ಸಂಯೋಜಕರು, ರೋಟರಿ ಐಸಿರಿ




ಐಶ್ವರ್ಯ ಸಾಪ್ತಾಹಿಕ ಸಂಚಿಕೆಯ ಎರಡನೇ ಸಂಚಿಕೆಯನ್ನು ನಮ್ಮ ಸ್ಥಾಪಕ ಅಧ್ಯಕ್ಷರಾದ ರೋಟೇರಿಯನ್ ಕೆ ಪ್ರಭಾಕರ ಶೆಟ್ಟಿ ಅವರು ಜುಲೈ 15ರ ವಾರದ ಸಭೆಯಲ್ಲಿ ಬಿಡುಗಡೆಗೊಳಿಸಿದರು.



**ಶ್ರೀಮತಿ ಲಕ್ಷ್ಮೀ ನಾಯ್ಕ್**
ಅಧ್ಯಕ್ಷರು. RCC ಐಸಿರಿ

ಇವರು ದಿವಂಗತ ಶೀನ ನಾಯ್ಕ್ ಹಾಗೂ ಶ್ರೀಮತಿ ಅವರ ತೃತೀಯ ಪುತ್ರಿಯಾಗಿ 1980ರಲ್ಲಿ ಜನಿಸಿದರು. ಪರ್ಕಳದ ಬಿ.ಎಮ್. ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಪರ್ಕಳ ಪ್ರೌಢಶಾಲೆಯಲ್ಲಿ ಪ್ರೌಢ ವಿದ್ಯಾಭ್ಯಾಸ ಮಾಡಿದರು. 80ನೇ ಬಡಗಬೆಟ್ಟು ಗ್ರಾಮದ ಶ್ರೀ ದುರ್ಗಾಪರಮೇಶ್ವರಿ ಹತ್ತುಸಮಸ್ತ ಮರಾಠಿ ಸಮುದಾಯದ ಗುರಿಕಾರರಾದ ಶ್ರೀ ಚಂದ್ರ ನಾಯ್ಕ್ ರೊಂದಿಗೆ ವಿವಾಹವಾದ ಇವರು ಓಂತಿಬೆಟ್ಟಿನಲ್ಲಿ ನೆಲೆಸಿದ್ದಾರೆ. ಉಡುಪಿ ಜಿಲ್ಲಾ ಮರಾಠಿ ಮಹಿಳಾ ವೇದಿಕೆಯ ಪ್ರಧಾನ ಕಾರ್ಯದರ್ಶಿಯಾಗಿ, ಜಿಲ್ಲಾ ಮರಾಠಿ ಸಂಘದ ಕಾರ್ಯಕಾರಿ ಸದಸ್ಯೆಯಾಗಿ, ಶ್ರೀ ಅಂಬಾಭವಾನಿ ಮಹಿಳಾ ಭಜನಾ ಮಂಡಳಿಯ ಸದಸ್ಯರಾಗಿ ಮತ್ತು ಇನ್ನೂ ಅನೇಕ ಸಂಘ ಸಂಸ್ಥೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುತ್ತಾರೆ. ಇವರ ಮಗಳು ಕುಮಾರಿ ಅನುಷಾ ಮಾಹೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಮಂಗಳೂರಿನ ಶ್ರೀನಿವಾಸ ಕಾಲೇಜಿನಲ್ಲಿ ಉಪನ್ಯಾಸಕಿ ಯಾಗಿದ್ದಾರೆ. ಮಗ ಆಶ್ಲೇಶ್ ಎಂಜಿಎಂ ಕಾಲೇಜಿನಲ್ಲಿ ಬಿ.ಎಸ್.ಸಿ. ಅಂತಿಮ ವರ್ಷದ ವ್ಯಾಸಂಗ ಮಾಡುತ್ತಿದ್ದಾರೆ.

ಇವರು ಶ್ರೀಮತಿ ಲೀಲಾವತಿ ಮತ್ತು ದಿವಂಗತ ಭಾಸ್ಕರ ಆಚಾರ್ಯರ ತೃತೀಯ ಪುತ್ರಿಯಾಗಿ 80 ಬಡಗಬೆಟ್ಟು ಅರ್ಬಿಯಲ್ಲಿ ಜನಿಸಿದರು. ಇವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ 80 ಬಡಗುಬೆಟ್ಟುವಿನಲ್ಲಿ ಪ್ರಾಥಮಿಕ, ಪರ್ಕಳ ಹೈಸ್ಕೂಲಿನಲ್ಲಿ ಪ್ರೌಢ, ಸರಕಾರಿ ಪದವಿ ಪೂರ್ವ ಕಾಲೇಜು ಹಿರಿಯಡಕದಲ್ಲಿ ಪಿಯುಸಿ ಮತ್ತು ಅಜ್ಜರಕಾಡಿನ ಸರಕಾರಿ ಮಹಿಳಾ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದಿರುತ್ತಾರೆ. ಪ್ರಸ್ತುತ ಇವರು ಕಡಿಯಾಳಿಯಲ್ಲಿರುವ ಸೋರ್ಸ್ ಹಬ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಒಡಿಯೂರು ಗ್ರಾಮವಿಕಾಸ ಯೋಜನೆಯ ಮಧುರ ತಂಡದ ಕಾರ್ಯದರ್ಶಿಯಾಗಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ 80 ಬಡಗಬೆಟ್ಟು ಇದರ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರಾಗಿ, ಕುಣಿತ ಭಜನೆ, ಸಂಜೀವಿನಿ ಮುಂತಾದ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದಾರೆ. ಪತಿ ಎಸ್. ಕೆ. ಅಶೋಕ್ ಆಚಾರ್ಯ ಮತ್ತು ಮುದ್ದಿನ ಮಗಳು ಎಸ್. ಎ. ಐಸಿರಿ ಆಚಾರ್ಯರೊಂದಿಗೆ ಪರ್ಕಳದಲ್ಲಿ ನೆಲೆಸಿದ್ದಾರೆ.



**ಶ್ರೀಮತಿ ಶಾರದಾ ಎಸ್.**
ಕಾರ್ಯದರ್ಶಿ. RCC ಐಸಿರಿ

## ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



ರೊ. ಕೆ. ಪ್ರಕಾಶ್ ಶೆಣೈ
(ಜುಲೈ 23)



ರೊ. ಡಾ. ಸ್ವಾತಿ ಪೈ
(ಜುಲೈ 25



ರೊ. ಸುಶೀಲಾ ಆರ್. ಪೂಂಜಾ
(ಜುಲೈ 27)

## ಬೌದ್ಧಿಕ ಸಿರಿ

ಕಪ್ಪೆಗಳ ದೊಡ್ಡ ಹಿಂಡೊಂದು ಒಂದೆಡೆ ಸಾಗುತ್ತಿತ್ತು. ದಾರಿಯ ಬಯಲೊಂದರಲ್ಲಿ ಒಂದು ಸಮಾರಂಭದ ಊಟೋಪಚಾರಕ್ಕಾಗಿ ಬಗೆಬಗೆಯ ಭಕ್ಷ್ಯಗಳು ಸಿದ್ಧವಾಗಿದ್ದವು. ಬದಿಯಲ್ಲೊಂದು ದೊಡ್ಡ ಕಠಾರದಲ್ಲಿ ಸುಮಾರು ಮುಕ್ಕಾಲು ಭಾಗದಷ್ಟು ಮಜ್ಜಿಗೆಯನ್ನೂ ಇಟ್ಟಿದ್ದರು.

ಹಾರುತ್ತಾ ಸಾಗಿದ ಕಪ್ಪೆಗಳ ಪೈಕಿ ಮೂರು ಕಪ್ಪೆಗಳು ತಪ್ಪಿ ಈ ಮಜ್ಜಿಗೆಯ ಪಾತ್ರೆಯೊಳಗೆ ಬಿದ್ದವು. ಇದನ್ನು ಗಮನಿಸಿದ ಒಂದಷ್ಟು ಕಪ್ಪೆಗಳು ಕಠಾರದ ಮೇಲ್ತುದಿಯ ರಿಮ್ ಮೇಲೆ ಕುಳಿತು ಅರಚಾಡಲಾರಂಭಿಸಿದವು.

"ನಿಮಗೆ ಕಣ್ಣು ಕಾಣಲ್ವಾ... ಇನ್ನು ನೀವು ಈ ಪಾತ್ರೆಯಿಂದ ಮೇಲೆ ಬರೋದು ಸಾಧ್ಯವೇ ಇಲ್ಲ... ಮಜ್ಜಿಗೆಯಲ್ಲೇ ಮುಳುಗಿ ಸಾಯುವಿರಿ... ನಿಮಗೆ ಹಾಗೆಯೇ ಆಗಬೇಕು.... ನೀವೆಷ್ಟೇ ಕೈಕಾಲು ಬಡಿದರೂ ನಿಮಗೆ ಮೇಲೆ ಬರಲು ಸಾಧ್ಯವೇ ಇಲ್ಲ... ನಿಮ್ಮ ಜೀವನ ಇಲ್ಲಿಗೆ ಮುಗಿಯಿತು..." ಹೀಗೆಲ್ಲಾ ವ್ಯಂಗ್ಯಮಾತುಗಳು, ಚುಚ್ಚು ಮಾತುಗಳಿಂದ ಕೇಕೆ ಹಾಕಲು ಶುರು ಮಾಡಿದವು.

ಇದನ್ನು ಕೇಳುತ್ತಲೇ ಕೈಕಾಲು ಬಡಿಯುತ್ತಿದ್ದ ಒಂದು ಕಪ್ಪೆ ಸುಸ್ತಾಗಿ ಮಜ್ಜಿಗೆಯಲ್ಲಿ ಮುಳುಗಿ ಸತ್ತಿತು.

ಈಗ ಮೇಲಿದ್ದ ಕಪ್ಪೆಗಳ "ನಾವು ಹೇಳಿದ್ದೇವಲ್ಲ... ಹೀಗೆ ಆಗುತ್ತದೆ ಎಂದು ನಮಗೆ ಮೊದಲೇ ಗೊತ್ತಿತ್ತು.... ನಾವು ಹೇಳಿದ ಹಾಗೆಯೇ ಆಯಿತು... ಉಳಿದೆರಡು ಕಪ್ಪೆಗಳು ಸ್ವಲ್ಪ ಹೊತ್ತಲ್ಲೇ ಸಾಯುವುದು ಗ್ಯಾರಂಟಿ..." ಎಂದೆಲ್ಲಾ ರಣಕೇಕೆ ಹೆಚ್ಚಾಯಿತು. ಕ್ಷಣಗಳಲ್ಲಿ ಮತ್ತೊಂದು ಕಪ್ಪೆಯೂ ಮಜ್ಜಿಗೆಯಲ್ಲಿ ಮುಳುಗಿ ಸತ್ತೇ ಹೋಯಿತು...

ಆದರೆ ಮೂರನೇ ಕಪ್ಪೆಯು ಇನ್ನಷ್ಟು ಹುಮ್ಮಸ್ಸಿನಿಂದ, ಮತ್ತಷ್ಟು ರಭಸದಿಂದ ಕೈಕಾಲುಗಳನ್ನು ಬಡಿದು ಮೇಲೆ ಬರಲು ಪ್ರಯತ್ನಿಸುತ್ತಲೇ ಹೋಯಿತು.

ಏನಾಶ್ಚರ್ಯ, ಮಜ್ಜಿಗೆಯಲ್ಲಿ ದಪ್ಪ ಬೆಣ್ಣೆಯ ಪದರ ಉತ್ಪತ್ತಿಯಾಗಿ ಈ ಕಪ್ಪೆಯು ಆ ಬೆಣ್ಣೆಯ ಮೇಲಿಂದ ಛಂಗನೆ ಹಾರಿ ಪಾತ್ರೆಯಿಂದ ಹೊರಬಿತ್ತು. ಅಲ್ಲಿದ್ದ ಕಪ್ಪೆಗಳೆಲ್ಲವೂ ಈ ಕಪ್ಪೆಯನ್ನು ಸುತ್ತುವರಿದು, ಜೀವ ಉಳಿಸಿಕೊಂಡು ಹಾರಲು ಹೇಗೆ ಸಾಧ್ಯವಾಯಿತು ಎಂದು ಕೇಳಿದವು. ಆ ಕಪ್ಪೆಯು ಸ್ವಲ್ಪ ಕಿವುಡು ಕಪ್ಪೆ ಆಗಿತ್ತು. ಆದುದರಿಂದ ಗಟ್ಟಿಯಾಗಿ ಪುನಹ ಕೇಳಿದಾಗ, ಅದು "ನಾನು ಇಷ್ಟು ಹೊತ್ತು ಜೋರಾಗಿ ಕೈಕಾಲು ಬಡಿಯಲು, ನಂತರ ಬೆಣ್ಣೆಯಿಂದ ಹಾರಿ ಬಂದು ಜೀವ ಉಳಿಸಲು ನೀವೆಲ್ಲ ಮೇಲೆ ನಿಂತು ನನ್ನನ್ನು ಉರಿದುಂಬಿಸಿದ್ದೇ ಕಾರಣ..!" ಎನ್ನಬೇಕೇ....!

ಅದು ಕಿವುಡು ಕಪ್ಪೆ ಆದುದರಿಂದ ಅದಕ್ಕೆ ಮೇಲಿದ್ದ ಕಪ್ಪೆಗಳ ಕಟು ಮಾತುಗಳು, ಟೀಕೆಗಳು ಕೇಳಲಿಲ್ಲ... ಇವುಗಳ ರಂಪಾಟ ನೋಡುತ್ತಿದ್ದ ಅದು, ಇವರೆಲ್ಲ ನನ್ನನ್ನು ಹುರಿದುಂಬಿಸುತ್ತಿವೆ ಅಂದುಕೊಂಡಿತು.

ಮನಸ್ಥಿತಿಯು ಪರಿಸ್ಥಿತಿಯನ್ನು ಹೇಗೆ ಬದಲಾಯಿಸುತ್ತದೆ ಅನ್ನುವುದಕ್ಕೆ, ಈ ಕಥೆಯೊಂದು ಉತ್ತಮ ಉದಾಹರಣೆ.

## ಶ್ರೀ ಜಯರಾಮ್ ಶೆಟ್ಟಿಗಾರ್ ರವರಿಗೆ ಅಭಿನಂದನೆಗಳು




ರೋಟರಿ ಜಿಲ್ಲೆ 3182ರ ಆರ್.ಸಿ.ಸಿ., ಜಿಲ್ಲಾ ಪ್ರತಿನಿಧಿಯಾಗಿ ನೇಮಕವಾಗಿರುವ, ಶ್ರೀ ಜಯರಾಮ್ ಶೆಟ್ಟಿಗಾರ್ ಅವರನ್ನು ರೋಟರಿ ಐಸಿರಿ ಪರ್ಕಳದ ಪರವಾಗಿ ಹಾಗೂ ಆರ್.ಸಿ.ಸಿ. ಐಸಿರಿಯ ಪರವಾಗಿ ಆರ್.ಸಿ.ಸಿ. ಐಸಿರಿಯ ಪದಪ್ರದನಾ ಸಮಾರಂಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು. ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್, ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ನಿಕಟಪೂರ್ವ ಅಧ್ಯಕ್ಷ ರೊ. ಸುನೀಲ್ ಕುಮಾರ್, ಸಮುದಾಯದಳ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, RCC ಸಂಯೋಜಕ ರೊ. ಕೆ. ಪ್ರಭಾಕರ ಶೆಟ್ಟಿ, ನಿಕಟಪೂರ್ವ ಕಾರ್ಯದರ್ಶಿ ರೊ. ಪಾಂಡುರಂಗ ಲಾಗ್ವಂಕರ್, RCC ಐಸಿರಿಯ ಶ್ರೀಮತಿ ಲಕ್ಷ್ಮೀ ನಾಯ್ಕ್, ಶ್ರೀ ಸತೀಶ್ ನಾಯ್ಕ್, ಶ್ರೀಮತಿ ಶಾರದಾ ಎಸ್., ಶ್ರೀಮತಿ ಶಾಲಿನಿ ಸಾಮಂತ್ ಉಪಸ್ಥಿತರಿದ್ದರು.

## ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ರ ಸಂದರ್ಶನ – ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, ಮಕ್ಕಳಾದ ಕುಮಾರಿ ಶ್ರೇಯಾ ಮತ್ತು ಕುಮಾರಿ ಯಶಾರೊಂದಿಗೆ



ನಮಸ್ತೆ ಮೇಡಂ... ರೋಟರಿಯ ಯಾವುದೇ ಸಭೆ ಇರಲಿ, ನೀವು ಮಾತನಾಡುವಾಗ ನನಗೆ ಅನ್ನಿಸಿರುವುದು ... ಸ್ಮಿತಾ ಮೇಡಂ ಅವರಿಗೆ ರೋಟರಿ ಸಂಸ್ಥೆಯ ಬಗ್ಗೆ ಇಷ್ಟೊಂದು ಮಮಕಾರ ಹೇಗೆ ಬಂತು ಎಂದು...? ತಿಳಿಸುವಿರಾ.

ನಾನು ರೋಟೇರಿಯನ್ ಆದದ್ದು ಒಂದು ಆಕಸ್ಮಿಕ. ಆದರೆ ಒಮ್ಮೆ ರೋಟರಿ ಪ್ರವೇಶಿಸಿದ ಮೇಲೆ ಇಲ್ಲಿ ಸೇವೆಗೆ ಇರುವ ಅವಕಾಶಗಳು ನನ್ನನ್ನು ತುಂಬ ಆಕರ್ಷಿಸಿತು. 2022ರಲ್ಲಿ ಮುಂದೆ ರೋಟರಿ ಐಸಿರಿ ಸ್ಥಾಪಿಸುವ ಸಮಯದಲ್ಲಿ ಪಟ್ಟ ಶ್ರಮದಿಂದ ಐಸಿರಿಯ ಮೇಲೆ ತುಂಬ ಪ್ರೀತಿ ಬೆಳೆಯಿತು. ನಾವು ಕ್ಲಬ್ ನ ಹಿರಿಯ ಸದಸ್ಯರಾಗಿ ನಮ್ಮ ಕ್ಲಬ್ ಅನ್ನು ಮುನ್ನಡೆಸುವಲ್ಲಿ ಪೋಷಕರ ಪಾತ್ರ ವಹಿಸಿದರೆ ಮಾತ್ರ club ಬೆಳೆಯಲು ಸಾಧ್ಯ ಅಂತ ನನ್ನ ಭಾವನೆ.

ನಿಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ನಾನು ರೋಟರಿ ಐಸಿರಿಗೆ ಸೇರಿದ್ದು. ಬಹಳಷ್ಟು ಕಾರ್ಯಕ್ರಮಗಳು ನಿಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಆಗಿವೆ... ಅದರಲ್ಲಿ ನಿಮಗೆ ಬಹಳಷ್ಟು ಸಂತೃಪ್ತಿ ತಂದುಕೊಟ್ಟ ಕೆಲವೊಂದು ಕಾರ್ಯಕ್ರಮಗಳು ಯಾವುವು?

ನೀವು ನನ್ನ ಅಧ್ಯಕ್ಷ ಅವಧಿಯಲ್ಲಿ ರೋಟರಿ ಐಸಿರಿಗೆ ಸೇರಿದ್ದು ನನಗೆ ತುಂಬ ಹೆಮ್ಮೆಯ ವಿಷಯ. ಅದಕ್ಕಾಗಿ ಮೊದಲಿಗೆ ಧನ್ಯವಾದಗಳು. ನನ್ನ ಅಧ್ಯಕ್ಷೀಯ ವರ್ಷದಲ್ಲಿ ಹಲವಾರು ಉತ್ತಮ ಉಪಯುಕ್ತ ಕಾರ್ಯಕ್ರಮಗಳು ನಡೆದಿವೆ. ರೋಟರಿ ಐಸಿರಿಯಲ್ಲಿ ಪ್ರತಿ ವರ್ಷ ನಡೆಯುವ ಕಾರ್ಯಕ್ರಮಗಳನ್ನು ಬಿಟ್ಟು ಹೊಸತೆಂದರೆ ಅಂಗನವಾಡಿ ಶಿಕ್ಷಕಿಯರ ತರಬೇತಿ ಕಾರ್ಯಾಗಾರ, ನರ್ಸರಿ training ಟೀಚರ್ ರವರಿಗೆ ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ತರಬೇತಿ, ಶಾಂತಿನಿಕೇತನ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ನಮ್ಮ ಇಂಟರಾಕ್ಟ್ ಕ್ಲಬ್ ಸ್ಥಾಪನೆ ಇವು ಬಹಳ ಇಷ್ಟವಾದ ಕಾರ್ಯಕ್ರಮಗಳು.

ಈ ಸಾಲಿನ ರೋಟರಿ ಜಿಲ್ಲಾ ಗವರ್ನರ್ ಡಾ. ಕೆ. ಪಾಲಾಕ್ಷ ಅವರ ತಂಡದಲ್ಲಿ ನೀವು ವಲಯಸೇನಾನಿಯಾಗಿ ಕಾರ್ಯನಿರ್ವಹಿಸುತ್ತಿರುವಿರಿ. ಇದುವರೆಗೆ ಹಲವಾರು ಕ್ಲಬ್ ಗಳ ಬಹಳಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೀರಿ. ಉನ್ನತ ಹುದ್ದೆಯಲ್ಲಿ ಇರುವ ಹಲವಾರು ರೋಟೇರಿಯನ್ ಗಳ ಜೊತೆ ಸಂವಹನ ನಡೆಸಿದ್ದೀರಿ. ನಿಮಗಿದು ಹೇಗೆ ಪ್ರಯೋಜನಕಾರಿ ?

ಇದೊಂದು ಸುಯೋಗ. ರೋಟರಿ ಜಿಲ್ಲೆ ಆಗಲೇ ನನ್ನನ್ನು ಗುರುತಿಸಿದೆ ಎಂಬ ಹೆಮ್ಮೆ ಇದೆ, ಜವಾಬ್ದಾರಿಯೂ ಇದೆ. ಜಿಲ್ಲೆ ಹಾಗೂ ವಲಯದ ಎಲ್ಲ ಕಾರ್ಯಕ್ರಮಗಳಲ್ಲಿ ಸತತವಾಗಿ ಭಾಗವಹಿಸುತ್ತಿದ್ದೇನೆ. ಇದರಿಂದ ನಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಒಡನಾಟ ಬೆಳೀತದೆ. ಅದು ನಮ್ಮ ವ್ಯವಹಾರಕ್ಕೂ ಸಹಾಯ ಆಗ್ತದೆ. ಅಲ್ಲದೆ ನಮ್ಮ ಸಹಾಯಕ್ಕೆ ಸದಾ ರೋಟರಿ ಎಂಬ ದೊಡ್ಡ ಕುಟುಂಬ ಇದೆ ಎಂಬ ವಿಶ್ವಾಸ ಬರುತ್ತದೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿ ಬೆಳೆಯುತ್ತದೆ.

ಎಲ್ಲಾ ರಂಗಗಳಲ್ಲಿ ಮಹಿಳೆಯರು ಪುರುಷರಿಗೆ ಏನೂ ಕಮ್ಮಿಯಿಲ್ಲ ಎನ್ನುವಂತೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದನ್ನು ನಾವಿಂದು ನೋಡುತ್ತಿದ್ದೇವೆ. ನಿಮಗೆ ಎಲ್ಲಾದರೂ, ಎಂತಾದರೂ ಅಸಮಾನತೆಯ ಅನುಭವ ಆಗಿದ್ದು ಉಂಟೇ... ಮಹಿಳೆ ಎನ್ನುವ ಕಾರಣಕ್ಕೆ ಯಾವುದಾದರೂ ಅವಕಾಶ ಕೈ ತಪ್ಪಿದ್ದು ಇದೆಯೇ?

ಅಸಮಾನತೆಯ ಅನುಭವ ಆಗ್ತಾ ಇರ್ತದೆ. ರೋಟರಿ ಜಗತ್ತಿನಲ್ಲೂ ಹೆಚ್ಚು ಮಹಿಳಾ ನಾಯಕರಿಲ್ಲ. ಆದ್ದರಿಂದ ಮೊದಲ ಬಾರಿಗೆ ನಮ್ಮನ್ನು ನೋಡುವಾಗ ಸಾಮಾನ್ಯವಾಗಿ ನಮ್ಮ ಆಸಕ್ತಿ ಸೀರೆ, ಒಡವೆ ಮತ್ತು ನಮ್ಮ ಪರಿಣಿತಿ ಕ್ಷೇತ್ರ ಅಡುಗೆಮನೆ ಎಂದು ಭಾವಿಸುತ್ತಾರೆ. ಅವಕಾಶಕ್ಕಾಗಿ ನಮ್ಮನ್ನು ನಾವು ಪರಿಚಯಿಸಬೇಕಾಗುತ್ತದೆ. ಆದರೆ ಒಮ್ಮೆ ನಮ್ಮ ಕಾರ್ಯವೈಖರಿಯನ್ನು ಸರಿಯಾಗಿ ಬಿಂಬಿಸಿದರೆ ಮತ್ತೆ ಎಲ್ಲರೂ ಪ್ರೋತ್ಸಾಹಿಸುತ್ತಾರೆ. ಅಲ್ಲದೆ ಮಹಿಳಾ ನಾಯಕರು ಇತರ ಮಹಿಳೆಯರ ಏಳಿಗೆಗೆ ಸಹಕರಿಸುತ್ತಲೇ ಬಂದಿದ್ದಾರೆ.

ರೊ. ಗುರುಪ್ರಸಾದ್ ಕಾಮತ್ ರವರೇ, ಸ್ಮಿತಾ ಮೇಡಮ್ ವ್ಯಕ್ತಿತ್ವದ ಮೇಲೆ ರೋಟರಿ ಬೀರಿರುವ ಪರಿಣಾಮವೇನು. ..?

ನನ್ನ ಪ್ರಕಾರ she born to be Rotarian. ರೋಟರಿಯ four–way test ಅವಳು ರೋಟರಿ ಸಂಸ್ಥೆಗೆ ಸೇರುವ ಮೊದಲೇ ಪಾಲಿಸುತ್ತಿದ್ದಳು. ಹಾಗೆಯೇ ಅವಳ ನೈಜ ವ್ಯಕ್ತಿತ್ವ ಮತ್ತು ಆಸಕ್ತಿಗೆ ಸರಿಯಾಗಿ ಅವಳಿಗೆ ರೋಟರಿ ಸಿಕ್ಕಿದೆ.

ಸಂದರ್ಶನಕ್ಕೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಶುಭವಾಗಲಿ.